ಶ್ರೀ ಡಿ.ಸುಧಾಕರ್: ಅದನ್ನು ತಮಗೆ ಕಳುಹಿಸಿ ಕೊಡುತ್ತೇನೆ.

ಶ್ರೀ ಹೆಚ್.ಎಂ.ವಿಶ್ವನಾಥ್: ಯಾವ ಸಮಿತಿಯೂ ಆಗಿಲ್ಲ, ಒಂದು ಸಭೆಯೂ ನಡೆದಿಲ್ಲ.

ಅಧ್ಯಕ್ಷರು: ಈ ಪ್ರಶ್ನೆ ಮುಗಿದಿದೆ. ಮುಂದಿನ ಪ್ರಶ್ನೆಗೆ ಹೋಗೋಣ. ಮುಂದಿನ ಪ್ರಶ್ನೆ, ರೋಷನ್ ಬೇಗ್‌ರವರು ಕೇಳಬೇಕು.

(ಗೊಂದಲ)

ಶ್ರೀ ಹೆಚ್.ಎಂ.ವಿಶ್ವನಾಥ್: ಕಳುಹಿಸುತ್ತೇವೆ, ಮಾಡುತ್ತೇವೆ ಎನ್ನುವ ಉತ್ತರವನ್ನಾದರೂ ಕೊಡಲಿ.

ಶ್ರೀ ಡಿ.ಸುಧಾಕರ್: ಮಾನ್ಯ ಸದಸ್ಯರು ಏನು ಪ್ರಶ್ನೆಯನ್ನು ಎತ್ತಿದ್ದಾರೆ, ಅದಕ್ಕೆ ಸಂಬಂಧಿಸಿದಂತೆ ತಕ್ಷಣ ಅಧಿಕಾರಿಗಳನ್ನು ಕಳುಹಿಸಿ, ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುತ್ತೇನೆ.

ಸರ್ಕಾರಿ ಆಸ್ಪತ್ರೆಗಳಲ್ಲಿ ನೀರಿನ ಕೊರತೆ ಬಗ್ಗೆ.

41 ಶ್ರೀ ರೋಷನ್ ಬೇಗ್.ಆರ್ (ಶಿವಾಜಿನಗರ)

ಶ್ರೀ ಬಿ.ಸಿ. ರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಸರ್ಕಾರಿ ಸ್ವಾಮ್ಯದ ಆಸ್ಪತ್ರೆಗಳಲ್ಲಿ ನೀರಿನ ಕೊರತೆಯಿದೆಯೇ?

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಅಡಿಯಲ್ಲಿ ಬರುವ ಆಸ್ಪತ್ರೆಗಳಲ್ಲಿ ನೀರಿನ ವ್ಯವಸ್ಥೆಯನ್ನು ಒದಗಿಸಲಾಗಿದೆ.

ಆ) ಹಾಗಿದ್ದಲ್ಲಿ, ಸರ್ಕಾರ ನೀರಿನ ಕೊರತೆಯನ್ನು ನೀಗಿಸಲು ಕೈಗೊಂಡ ಕ್ರಮಗಳೇನು?

ಉದ್ಭವಿಸುವುದಿಲ್ಲ.

ಶ್ರೀ ಆರ್. ರೋಷನ್‌ಬೇಗ್: ಮಾನ್ಯ ಸಭಾಧ್ಯಕ್ಷರೇ, ಸರ್ಕಾರಿ ಆಸ್ಪತ್ರೆಗಳಲ್ಲಿ water scarcity ಇದೆ, ಅಲ್ಲಿ ನೀರು ಸಿಗುತ್ತಿಲ್ಲ, ಅದರ ಕೊರತೆಯನ್ನು ನೀಗಿಸಲು ಏನು ಕ್ರಮ ಕೈಗೊಂಡಿದ್ದೀರಿ ಎನ್ನುವ ಪ್ರಶ್ನೆಯನ್ನು ನಾನು ಕೇಳಿದ್ದೇನೆ. ಅದಕ್ಕೆ ಇವರು, for Hospitals coming under the Healh and Family Welfare ನಾವು ನೀರನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಇದು ಎಂಥ ಬೇಜವಾಬ್ದಾರಿಯ ಕೆಲಸ ನೋಡಿ. ಅಧಿಕಾರಿಗಳನ್ನು ನೋಡಿದರೆ ನನಗೆ ಅಯ್ಯೋ ಎನಿಸುತ್ತದೆ. ಇವರಿಗೆ ರಾಜ್ಯೋತ್ಸವ ಅವಾರ್ಡ್‌ಗೆ ರೆಕಮಂಡ್ ಮಾಡಬೇಕು. ಮಂತ್ರಿಗಳು ಯುವಕರಿದ್ದಾರೆ.

ನೀವಾದರೂ ಏನು ಉತ್ತರ ಬರೆದು ಕೊಟ್ಟಿದ್ದಾರೆ ಎನ್ನುವುದನ್ನು ಓದಬಾರದೇ? ಅಧಿಕಾರಿಗಳು ಏನೋ ಬರೆದು ಕೊಟ್ಟುಬಿಟ್ಟರೆ ಅದನ್ನು ನೀವು ಓದಿಬಿಡುವುದಾ? I feel sorry. ಉದಾಹಣೆಗಾಗಿ ಹೇಳುತ್ತೇನೆ, ಬೆಂಗಳೂರು ನಗರದಲ್ಲಿ Victoria Hospital, Bowring Hospital, Isolation Hospital, Minto Hospital, Vani Vilas Hospital ಈ ಎಲ್ಲಾ ಆಸ್ಪತ್ರೆಗಳಲ್ಲಿ ಒಂದೊಂದು ಸಾರಿ ನೀರು ಸಿಕ್ಕುವುದಿಲ್ಲ. ಕುಡಿಯುವ ನೀರು ಬಿಡಿ, ಬಾತ್ ರೂಮ್‌ಗೆ ಹೋಗುವುದಕ್ಕೆ ಕೂಡ ನೀರಿಲ್ಲ. ರಾಮನಗರ, ಬಿಜಾಪುರ, ಬೀದರ್, ಗುಲ್ಬರ್ಗಾ ಇಂಥ ಕಡೆಗಳಿಂದ ಮೆಸೇಜ್‌ಗಳನ್ನು ತೆಗೆದುಕೊಂಡರೂ, ಅಲ್ಲೂ ಕೂಡ ಆಸ್ಪತ್ರೆಗಳಲ್ಲಿ ನೀರು ಸರಿಯಾಗಿ ಸಿಗುತ್ತಿಲ್ಲ. ನಾನು ನಿಮಗೆ ಕೇಳುವ ಪ್ರಶ್ನೆ ಇಷ್ಟೇ, medicinesಗೆ ನೀವು funds ಇಡುವ ಹಾಗೆ, ಆರೋಗ್ಯ ಇಲಾಖೆಯಿಂದ ಆಸ್ಪತ್ರೆಗಳ water bill ಕಟ್ಟುವುದಕ್ಕೆಂದೇ ದುಡ್ಡನ್ನೇನಾದರೂ ಇಟ್ಟಿದ್ದೀರಾ? ಎರಡನೆಯದಾಗಿ, ಆಸ್ಪತ್ರೆಗಳಿಗೆ commercial rates charge ಮಾಡುತ್ತಿದ್ದಾರೆ. ವಿಕ್ಟೋರಿಯಾ ಆಸ್ಪತ್ರೆಯವರು ಹೋದ ತಿಂಗಳು 40 ಲಕ್ಷ ರೂಪಾಯಿಗಳ water bill ಕಟ್ಟಿದ್ದಾರೆ. ಬೌರಿಂಗ್ ಆಸ್ಪತ್ರೆಯವರು 38 ಲಕ್ಷ ರೂಪಾಯಿಗಳನ್ನು ಕಟ್ಟಿದ್ದಾರೆ. ಇವರು ಜನವರಿಯಲ್ಲಿ 35 ಲಕ್ಷ ರೂಪಾಯಿಗಳನ್ನು ಕಟ್ಟಿದ್ದಾರೆ. ನಮಗೆ commercial rate charge ಮಾಡುವುದು ಬೇಡ, residential rateನಲ್ಲಿ ನೀರು ಕೊಡಿ ಎಂದು ಆಸ್ಪತ್ರೆಗಳವರು ಕೇಳುತ್ತಿದ್ದಾರೆ. Mallya Hospital, Manipal Hospital, Apollo Hospital, ಈಗ ಬಂದಿರುವ ಹೊಸ Five Star Hospital ಇಂಥ ಆಸ್ಪತ್ರೆಗಳಿಗೆ ನೀವು commercial rate charge ಮಾಡಿದರೆ ಒಪ್ಪಬಹುದು. ಆದರೆ ಸರ್ಕಾರಿ ಆಸ್ಪತ್ರೆಗಳಿಗೂ commercial rate charge ಮಾಡುತ್ತಿದ್ದಾರೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಯಾರಾದರೂ toiletಗೆ ಹೋಗಬೇಕೆಂದರೆ ನೀರಿಲ್ಲ. ಆರೋಗ್ಯ ಮಂತ್ರಿಗಳ relativeಗಳಲ್ಲಿ ಯಾರಾದರೂ ಈ ಆಸ್ಪತ್ರೆಗಳಿಗೆ ಹೋದರೆ ಗೊತ್ತಾಗುತ್ತದೆ. ಅದರೆ ಅವರ್ಯಾರೂ ಈ ಆಸ್ಪತ್ರೆಗಳಿಗೆ ಹೋಗುವುದಿಲ್ಲ. ನೀವೆಲ್ಲ ಬಳ್ಳಾರಿಯಲ್ಲಿ ಬರೀ miningನಲ್ಲಿ busy ಯಾಗಿದ್ದೀರಿ. ಸರ್ಕಾರಿ ಆಸ್ಪತ್ರೆಗಳಲ್ಲಿ medicines ಸಿಗಲಿಲ್ಲ ಎಂದರೆ, ಬಾತ್ ರೂಂಗೆ ಹೋದರೆ ನೀರು ಸಿಗಲಿಲ್ಲ ಎಂದರೆ, ನೀವು ಇನ್ನೇನು ಮಾಡುತ್ತೀರಿ? ನೀವು ಬರೀ ಗಂಗಾಜಲ, ಲಡ್ಡು, election ಗಿಮಿಕ್ಸ್ ಮಾಡುತ್ತಾ ಹೋದರೆ ಹೇಗೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ರೋಷನ್ ಬೇಗ್‌ರವರು ಕೇಳಿದ ಪ್ರಶ್ನೆಗೆ ಸರ್ಕಾರ ಜವಾಬ್ದಾರಿಯುತವಾದಂಥ ಉತ್ತರವನ್ನು ಕೊಟ್ಟಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ನಡೆಸುತ್ತಿರುವಂಥ ಆಸ್ಪತ್ರೆಗಳಿಗೆ ನೀರಿನ ಕೊರತೆ ಇಲ್ಲದೇ ಇರುವಂತೆ, ಬೋರ್‌ವೆಲ್ ಮೂಲಕ ಮತ್ತು ಬೇರೆಬೇರೆ

ನೀರಾವರಿ ಸೌಲಭ್ಯಗಳನ್ನು ಒದಗಿಸುವುದರ ಮೂಲಕ ನೀರಿನ ಕೊರತೆಯನ್ನು ತುಂಬಿಕೊಂಡಿದ್ದೇವೆ. ಆದರೆ ನೀವು ಹೇಳುತ್ತಿರುವ ಬೌರಿಂಗ್ ಆಸ್ಪತ್ರೆ ವಾಣಿವಿಲಾಸ್ ಆಸ್ಪತ್ರೆ ಇತ್ಯಾದಿ ಆಸ್ಪತ್ರೆಗಳು ವೈದ್ಯಕೀಯ ಶಿಕ್ಷಣ ಇಲಾಖೆಯಡಿಯಲ್ಲಿ ಬರುವಂಥ ಆಸ್ಪತ್ರೆಗಳು. ನೀವೂ ಸರ್ಕಾರ ನಡೆಸಿದಂಥವರು. ನೀವೂ ಸರ್ಕಾರದಲ್ಲಿದ್ದಂಥವರು. ನೀವು ಈ ರೀತಿ ಹೇಳಬಾರದು. ನಾವು ಈ ಪ್ರಶ್ನೆಯನ್ನು Medical Educationಗೆ ವರ್ಗಾಯಿಸುತ್ತೇವೆ. ವರ್ಗಾಯಿಸುವುದಕ್ಕೆ ತಾವು ಅನುಮತಿಯನ್ನು ಕೊಡಬೇಕೆಂದು ನಾನು ಅಧ್ಯಕ್ಷರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಅವರು ಈ ರೀತಿ ಉತ್ತರ ಕೊಡುವುದು ಸರಿಯಲ್ಲ. ಅದು ವೈದ್ಯಕೀಯ ಶಿಕ್ಷಣ ಇಲಾಖೆಯ ಅಡಿಯಲ್ಲಾದರೂ ಬರಲಿ ಅಥವಾ ನಿಮ್ಮ ಇಲಾಖೆಯಲ್ಲಾದರೂ ಬರಲಿ, ಇದು ಸರ್ಕಾರಿ ಆಸ್ಪತ್ರೆಗಳ ವಿಚಾರ, ಸರ್ಕಾರ ಸರಿಯಾದ ರೀತಿಯಲ್ಲಿ ಉತ್ತರ ಕೊಡಬೇಕು.

(ಗೊಂದಲ)

ಅಧ್ಯಕ್ಷರು: ಅದು Medical Education Departmentನಲ್ಲಿ ಬಂದರೂ ಸಹ, ಈಗ ಅವರು ಸರ್ಕಾರದ ಗಮನಕ್ಕೆ ಏನು ವಿಷಯವನ್ನು ತಂದಿದ್ದಾರೆ, ಅದನ್ನು ಪರಿಹರಿಸಬೇಕು.

(ಈ ಹಂತದಲ್ಲಿ ಮುಜರಾಯಿ ಮತ್ತು ವಸತಿ ಇಲಾಖೆಯ ಸಚಿವರಾದ ಶ್ರೀ.ಎನ್. ಕೃಷ್ಣಯ್ಯ ಶೆಟ್ಟಿಯವರು, ಗಂಗಾಜಲದ ಬಗ್ಗೆ ಪ್ರಸ್ತಾಪಿಸಿರುವುದಕ್ಕೆ ಉತ್ತರ ಕೊಡುವುದಕ್ಕೆ ಅವಕಾಶವನ್ನು ಕೇಳಿದರು)

ಅಧ್ಯಕ್ಷರು: ಕೃಷ್ಣಯ್ಯ ಶೆಟ್ಟಿಯವರೇ, ಅವರ ಉತ್ತರ ಮುಗಿಯಲಿ, ನೀವು ಕುಳಿತುಕೊಳ್ಳಿ.

ಶ್ರೀ. ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೇ, ಈಗ ತಾವು ತಮ್ಮ ಭಾವನೆಯನ್ನು ವ್ಯಕ್ತಪಡಿಸಿದ ಹಾಗೆ, ರೋಷನ್ ಬೇಗ್‌ರವರ ಭಾವನೆ ಮತ್ತು ಈ ಸದನದ ಸದಸ್ಯರ ಭಾವನೆ ಈ ಸರ್ಕಾರಕ್ಕೆ ನಿಶ್ಚಿತವಾಗಿ ಅರ್ಥವಾಗುತ್ತದೆ. ಯಾವುದೇ ಸರ್ಕಾರಿ ಆಸ್ಪತ್ರೆಗಳಿಗೆ ನೀರು, ಔಷಧಿ, ವೈದ್ಯರು, ಯಾವುದೇ ಇತರ ಸೌಲಭ್ಯದ ಕೊರತೆಯಾಗದಂತೆ ನೋಡಿಕೊಳ್ಳುವುದು ನಮ್ಮ ಸರ್ಕಾರದ ಜವಾಬ್ದಾರಿ. ಅದನ್ನು ನಾವು ನೋಡಿಕೊಳ್ಳುತ್ತೇವೆ. ಆದರೆ ನೀವು ಬೇರೆ ಶಬ್ದಗಳನ್ನು ಬಳಸಿ ಮಾತನಾಡಿದರೆ, ಆಗ ನಿಮ್ಮ ಪ್ರಶ್ನೆಯ ಉದ್ದೇಶವನ್ನೇ ನಾನು ಬೇರೆ ರೀತಿಯಲ್ಲಿ ಅರ್ಥೈಸಿಕೊಳ್ಳಬೇಕಾಗುತ್ತದೆ. ಹಾಗಾಗಿ, ನಿಮ್ಮ ಪ್ರಾಮಾಣಿಕವಾದಂಥ, ಸದುದ್ದೇಶದ ಭಾವನೆಗಳಿಗೆ ಸರ್ಕಾರ ಸ್ಪಂದಿಸುವುದಕ್ಕೆ ಸಿದ್ಧವಿದೆ. ಆದರೆ. ಈ ವಿಷಯವನ್ನು ನೀವು ಬೇರೆ ರೀತಿ ಅರ್ಥೈಸುವುದಾದರೆ, ಅದನ್ನು ಎದುರಿಸುವುದಕ್ಕೂ ನಾವು ಸಿದ್ಧರಿದ್ದೇವೆ.

ಹಾಗಾಗಿ, ನಿಶ್ಚಿತವಾಗಿ ವೈದ್ಯಕೀಯ ಶಿಕ್ಷಣ ಇಲಾಖೆಯ ಅಡಿಯಲ್ಲಿ ಬರುವಂಥ ಆಸ್ಪತ್ರೆಗಳಲ್ಲಿ ನೀರಿನ ಕೊರತೆ ಇರದಂತೆ ನಾವು ನೋಡಿಕೊಳ್ಳುತ್ತೇವೆ.

(ಗೊಂದಲ)

ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಪ್ರಶ್ನೆಗೆ ಈ ರೀತಿಯೇ ಉತ್ತರ ಕೊಡುವುದು.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಈ ಆಸ್ಪತ್ರೆಗಳಲ್ಲಿ ನೀರಿನ ಕೊರತೆ ಇಲ್ಲದೇ ಇರುವಂತೆ ಎಲ್ಲ ರೀತಿಯ ಎಚ್ಚರಿಕೆಗಳನ್ನು ತೆಗೆದುಕೊಳ್ಳುವುದಕ್ಕೆ ಅಗತ್ಯವಾದಂಥ ಕ್ರಮಗಳನ್ನು ತೆಗೆದು ಕೊಳ್ಳುತ್ತೇವೆ.

(ಗೊಂದಲ)

ಅಧ್ಯಕ್ಷರು: ಕೃಷ್ಣಯ್ಯ ಶೆಟ್ಟಿಯವರೇ, ಈಗ ಅದನ್ನು ವಿಷಯಾಂತರ ಮಾಡಲಿಕ್ಕೆ ನಾನು ತಯಾರಿಲ್ಲ. ಇದು ಪ್ರಶ್ನೋತ್ತರ ವೇಳೆ.

ಶ್ರೀ ಗೋವಿಂದ ಎಂ ಕಾರಜೋಳ: ಮಾನ್ಯ ರೋಷನ್ ಬೇಗ್‌ರವರು ಈ ರಾಜ್ಯದಲ್ಲಿ ಮಂತ್ರಿಗಳಾಗಿ ಕೆಲಸ ಮಾಡಿ ಅಪಾರ ಅನುಭವವನ್ನು ಹೊಂದಿರುವಂವರು. ಪ್ರಶ್ನೋತ್ತರವನ್ನು ಯಾವ ರೀತಿ ಕೇಳಬೇಕು ಎನ್ನುವುದನ್ನು ಅವರು ಅರ್ಥ ಮಾಡಿಕೊಂಡು ಕೇಳಬೇಕು. ಅವರು ಗಣಿ, ಗಂಗಾಜಲ ಎಂದೆಲ್ಲಾ ಹೇಳಿದರು. ಅವರೇನು ಕೇಳಬೇಕಾಗಿತ್ತು.....

(ಗೊಂದಲ)

ಶ್ರೀ ಗೋವಿಂದ ಎಂ ಕಾರಜೋಳ: ನಾನು ಹೇಳುವುದನ್ನು ಕೇಳಿ. ನೀವು ಯಾವ ರೀತಿ ಉತ್ತರ ಬಯಸಿದರೆ ಅದೇ ರೀತಿ ನಾವು ಉತ್ತರ ಕೊಡುತ್ತೇವೆ.

(ಗೊಂದಲ)

ಅಧ್ಯಕ್ಷರು: ಈ ಪ್ರಶ್ನೆ ಮುಗಿಯಿತು. ಈಗ ವಿಷಯಾಂತರ ಮಾಡುವುದು ಬೇಡ. ಈಗ ಮುಂದಿನ ಪ್ರಶ್ನೆ ಜಯಚಂದ್ರರವರದ್ದು.

ಶ್ರೀ ಗೋವಿಂದ ಎಂ ಕಾರಜೋಳ: ಅವರು ಬಳಸುವ ಭಾಷೆ ಸರಿಯಾಗಿರಬೇಕು.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ: ಇದರಲ್ಲಿ ಗಣಿ ವಿಚಾರದಲ್ಲಿ ಏಕೆ mix ಮಾಡಿದಿರಿ?

ಅಧ್ಯಕ್ಷರು: ಜಯಚಂದ್ರರವರು ಪ್ರಶ್ನೆಯನ್ನು ಕೇಳಬೇಕು. ವಿಷಯಾಂತರ ಮಾಡುವುದು ಬೇಡ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಅವರೂ ಹೇಳಿದರು, ನೀವೂ ಹೇಳಿದಿರಲ್ಲ, ಆ ವಿಷಯ ಮುಗಿಯಿತು. That question is closed.

ಶ್ರೀ ಗೋವಿಂದ ಎಂ ಕಾರಜೋಳ: ನೀವು ಸುತ್ತಿ ಬಳಸಿ ಮಾತನಾಡಿದರೆ, ನಾವೂ ಸುತ್ತಿ ಬಳಸಿ ಉತ್ತರ ಹೇಳಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು: ಸಾಕು. ಈಗ ನಾನು ಮುಂದಿನ ಪ್ರಶ್ನೆಗಾಗಿ, ಜಯಚಂದ್ರರವರನ್ನು ಕರೆದಿದ್ದೇನೆ.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೇ, ಗಂಗಾಜಲ ಬರುತ್ತಿದೆಯಂತೆ. ಅದು ಹೇಗೆ ಹರಿಯುತ್ತದೆ ಎಂದು ಸ್ವಲ್ಪ ನೋಡೋಣ.

ಅಧ್ಯಕ್ಷರು: ಅದು ಬೇಡ. ಅದಕ್ಕೆ ಗೋವಿಂದ ಕಾರಜೋಳರವರು ಉತ್ತರ ಕೊಟ್ಟಿದ್ದಾರೆ. ಮತ್ತೆ ಅದು ಬೇಡ. ಮತ್ತೆ ಅದನ್ನು ಪ್ರಸ್ತಾಪಿಸಿದರೆ ವಿಷಯಾಂತರವಾಗುತ್ತದೆ. I don't allow further discussion in this regard. ಈ ವಿಷಯ ಇಲ್ಲಿಗೆ ಮುಗಿಯಿತು. ಮುಂದಿನ ಪ್ರಶ್ನೆಯನ್ನು ಜಯಚಂದ್ರರವರು ಕೇಳಬೇಕು.

ಶ್ರೀ ಟಿ.ಬಿ.ಜಯಚಂದ್ರ: ಅಲ್ಲಿ ಮಿನಿಸ್ಟರುಗಳೇ ನಿಂತಿದ್ದರೆ ನಾನು ಏನು ಪ್ರಶ್ನೆ ಕೇಳಬೇಕು?

ಅಧ್ಯಕ್ಷರು: ವಿಷಯಾಂತರವಾಗುತ್ತದೆ. ಅದು ಬೇಡ, I do not allow. ಪ್ರಶ್ನೋತ್ತರ ಕಾಲದಲ್ಲಿ ಈ ರೀತಿ ಬೇರೆ ವಿಷಯಗಳನ್ನು ಚರ್ಚೆ ಮಾಡಲು ನಾನು ಅವಕಾಶ ಕೊಡುವುದಿಲ್ಲ.

ಶ್ರೀ ನೆಹರೂ ಓಲೆಕಾರ್ ಚನ್ನಬಸಪ್ಪ: ಗಂಗಾಜಲದ ಬಗ್ಗೆ ಮಾತನಾಡುವುದಕ್ಕೆ ಶ್ರೀ ಕೃಷ್ಣಯ್ಯ ಶೆಟ್ಟಿಯವರಿಗೆ ಅವಕಾಶ ಕೊಡಿ.

ಅಧ್ಯಕ್ಷರು: ಬೇರೆ ವಿಷಯಗಳಿಗೆ ನಾನು ಅವಕಾಶ ಕೊಡುವುದಿಲ್ಲ. ಜಯಚಂದ್ರರವರೇ ನೀವು ಪ್ರಶ್ನೆಯನ್ನು ಕೇಳುವಿರೋ, ಇಲ್ಲವೆಂದರೆ ನಾನು ಬೇರೆ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇನೆ.